**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

**ಸಿ.ಸಿ. 446/2023**

ಸಾಕ್ಷಿಯ ಹೆಸರು :- ನಂಜೇಶ್ ಕುಮಾರ್

ತಂದೆ/ ಗಂಡನ ಹೆಸರು :- ಮಲ್ಲೇಗೌಡ

ವಯಸ್ಸು :- 41 ವರ್ಷ

ಉದ್ಯೋಗ :- ವ್ಯವಸಾಯ

ವಾಸಸ್ಥಳ :- ಅಣ್ಣೇದೊಡ್ಡಿ

ಸಾಕ್ಷಿಗೆ ದಿನಾಂಕಃ 23-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎಪಿಪಿ ರವರಿಂದ ಃ

ಚಾಸಾ-1 ರಿಂದ 3 ಮತ್ತು 5 ರವರ ಪರಿಚಯ ಇರುತ್ತದೆ, ಆರೋಪಿತರು ನಮ್ಮ ಊರಿನವರು. ಪರಿಚಯ ಇರುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ. ನಾನು ಯಾವುದೇ ಗಲಾಟೆ ನೋಡಿಲ್ಲ, ಯಾವುದೇ ಜಗಳ ಬಿಡಿಸಿಲ್ಲ, ನಾನು ಗಲಾಟೆಯ ಸ್ಥಳಕ್ಕೆ ಬರುವಷ್ಟರೊಳಗೆ ಗಲಾಟೆ ಮುಗಿದಿತ್ತು. ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ

ದಿ 27-01-2023 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಚಾಸಾ-1 ರವರು ತಿಮ್ಮಯ್ಯ ರವರ ಮನೆ ಬಳಿ ಇದ್ದಾಗ ಅಲ್ಲಿಗೆ ಬಂದ ಆರೋಪಿಯು ಹಳೆಯ ದ್ವೇಷದ ಹಿನ್ನಲೆಯಲ್ಲಿ ಏಕಾ ಏಕಿ ಜಗಳ ತೆಗೆದು ಕಬ್ಬಿಣದ ಪೈಪಿನಿಂದ ಬಲವಾಗಿ ಚಾಸಾ-2 ರವರಿಗೆ ಹಲ್ಲೆ ಮಾಡಿರುತ್ತಾರೆಂದರೆ ಸರಿಯಲ್ಲ. ಇದರಿಂದ ಚಾಸಾ-2 ರವರ ನೆಲಕ್ಕೆ ಬಿದ್ದಿದ್ದು ನಂತರ ಪೈಪಿನಿಂದ ಚಾಸಾ-2 ರವರ ಬುಜಕ್ಕೆ ಹೊಡೆದು ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ. ನಂತರ ನೀವು ಮತ್ತು ಚಾಸಾ-3, 5 ರವರು ಜಗಳ ಬಿಡಿಸಿರುತ್ತೇವೆಂದರೆ ಸರಿಯಲ್ಲ. ನಾನು ಚಾಸಾ-2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆಂದರೆ ಸರಿಯಲ್ಲ.

ಸದರೀ ವಿಚಾರವನ್ನು ನಾನು ನೋಡಿದ್ದೇನೆಂದು ಹೇಳಿಕೆಯನ್ನು ನೀಡಿದ್ದೇನೆಂದರೆ ಸರಿಯಲ್ಲ. ಸದರೀ ಹೇಳಿಕೆಯ ಭಾಗವನ್ನು ನಿ.ಪಿ–4 ಎಂದು ಗುರುತಿಸಲಾಯಿತು.

ನಿಪಿ-4 ರ ವಿಚಾರಗಳು ನಿಮಗೆ ಎಲ್ಲಾ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ.ವಕೀಲರಿಂದಃ-

ಏನು ಇಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು